International Journal of Kannada Research
www.kannadajournal.com

**ISSN: 2454–5813**
IJKR 2021; 7(3): 07-10
© 2021 IJKR
www.kannadajournal.com
Received: 03-05-2021
Accepted: 07-06-2021

**Suvarna Patil**
Assistant Professor, Department of Kannada, S.K. College of Arts, Commerce and Science, Talikoti, Karnataka, India

**Corresponding Author:**
**Suvarna Patil**
Assistant Professor, Department of Kannada, S.K. College of Arts, Commerce and Science, Talikoti, Karnataka, India

# ವಚನ ಸಾಹಿತ್ಯದಲ್ಲಿ ಶಿವಶರಣೆಯರು

## Suvarna Patil

**ಪ್ರಸ್ತಾವನೆ:** ಕನ್ನಡ ಸಾಹಿತ್ಯದ ಪರ್ವಕಾಲ, ಸುವರ್ಣಯುಗ, ೧೨ನೇ ಶತಮಾನದ ವಚನ ಸಾಹಿತ್ಯಕ್ಕೆ ವಿಶಿಷ್ಟ ಸ್ಥಾನವಿದೆ. ವೇದಗಳ ಕಾಲದಿಂದಲೂ ಸಾಹಿತ್ಯ ಪಂಡಿತರ, ವಿದ್ವಾಂಸರ ಸ್ವತ್ತಾಗಿ, ಸಂಸ್ಕೃತ ಭೂಯಿಷ್ಠವಾಗಿತ್ತು. ಶ್ರೀಸಾಮಾನ್ಯರಿಗೆ ಅವರ ಸಾಹಿತ್ಯ ರಚನೆ ಅರ್ಥವಾಗುತ್ತಿರಲಿಲ್ಲ. ಭಾರತೀಯ ಮಹಿಳೆಯರ ಪಾಲಿಗೆ ಪುರಾಣ ಹಾಗೂ ಧರ್ಮಶಾಸ್ತ್ರಗಳ ಕಾಲ ಕಗ್ಗತ್ತಲ ಯುಗವಾಗಿತ್ತು. ಶತಶತಮಾನಗಳ ಕಾಲದಿಂದಲೂ ಸಮಾಜದಲ್ಲಿ ಹೆಣ್ಣಿನ ಬಗೆಗಿದ್ದ ಪೂರ್ವಾಗ್ರಹ ಪೀಡಿತ ದೃಷ್ಟಿದೋಷವನ್ನು ಸರಿಪಡಿಸಿದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ. ಹನ್ನೆರಡನೆಯ ಶತಮಾನದ ಶರಣರ ಕ್ರಾಂತಿ ಕರ್ನಾಟಕ ಇತಿಹಾಸದಲ್ಲಿ ಚಿರಸ್ಮರಣೀಯವಾದುದು. ಮೂಲತಃ ಅದು ಧಾರ್ಮಿಕ ಕ್ರಾಂತಿಯಾದರೂ, ಆ ಮೂಲಕವಾಗಿ ಸಮಗ್ರ ಸಾಮಾಜಿಕ ಜೀವನವನ್ನು ಪರಿಶೋಧಿಸಿ, ಸಮಾನತೆಯ ತಳಹದಿಯ ಮೇಲೆ, ಮಾನವೀಯ ಮೌಲ್ಯಗಳ ಮೇಲೆ ಸಮಾಜವನ್ನು ನಿರ್ಮಿಸುವುದು ಶರಣರ ಧೋರಣೆಯಾಗಿತ್ತು. ರೂಢಿಗತವಾಗಿದ್ದ ಜಾತಿ–ಬೇಧ, ವರ್ಗಬೇಧ, ಲಿಂಗಬೇಧ, ವೃತ್ತಿಬೇಧಗಳಂತಹ ಜಾಡ್ಯಗಳನ್ನು ಪರಿಹರಿಸಿ, ಕಾಯಕ ಮಹತ್ವವನ್ನು ನೆಲೆಗೊಳಿಸಿ, ಸಮಾಜದಲ್ಲಿ ಮಾನವತೆಯ ಏಕತೆಯನ್ನು ಸ್ಥಾಪಿಸಿ ಸ್ತ್ರೀಯರಿಗೆ ಸಮಾನ ಅವಕಾಶ ಕಲ್ಪಿಸಿಕೊಟ್ಟರು. ಆಗ ಅಲ್ಲಿನ ಅನುಭವ ಮಂಟಪದಲ್ಲಿ ಸೇರಿದ ಶಿವಶರಣೆಯರು ಜಗತ್ತಿಗೆ ಸ್ತ್ರೀ ಧರ್ಮದ ಮೇಲ್ಮೆಯನ್ನು ಸಾರಿದರು. ಧಾರ್ಮಿಕ, ಸಾಮಾಜಿಕ ವಿಷಯಗಳ ಬಗೆಗೆ ಚಿಂತನೆ ನಡೆಸಿದರು. ತಮ್ಮ ಅಂತರಾಳದ ಭಾವನೆಗಳಿಗೆ ಶಾಬ್ದಿಕ ರೂಪಕೊಟ್ಟರು. ದೇಶ, ಕಾಲ, ಜಾತಿ, ಕುಲ–ಪಂಥಗಳನ್ನು ಮರೆತು, ಕಟ್ಟುಪಾಡುಗಳನ್ನು ಬದಿಗೊತ್ತಿ ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಪೂಜೆ–ಪುನಸ್ಕಾರ, ಆಚಾರ–ವಿಚಾರಗಳನ್ನು ಹೋಗಲಾಡಿಸಿ ಏಕತೆಯನ್ನು ಸಾಧಿಸಿ ಮಾನವ ಧರ್ಮವನ್ನು ನೆಲೆಗೊಳಿಸಿದ್ದರು. ಇವರೆಲ್ಲರ ವಚನಗಳು ನಮಗೆ ಇಂದಿಗೂ ಪ್ರಸ್ತುತವಾಗಿವೆ. ೧೨ನೇ ಶತಮಾನದ ವಚನಕಾರ್ತಿಯರಲ್ಲಿ ಪ್ರಮುಖವಾಗಿ ಅಕ್ಕಮಹಾದೇವಿ, ಮುಕ್ತಾಯಕ್ಕ, ಅಕ್ಕನಾಗಮ್ಮ, ಸತ್ಯಕ್ಕ, ದುಗ್ಗಳೆ, ಸುಗ್ಗಲೆ, ಆಯ್ದಕ್ಕಿ ಲಕ್ಕಮ್ಮ, ಲಿಂಗಮ್ಮ ಇವರೆಲ್ಲರ ಸಂಕ್ಷಿಪ್ತ ಜೀವನದ ಮಾಹಿತಿ ಹಾಗೂ ವಚನ ವಿಶ್ಲೇಷಣೆ ಮಾಡುವ ಮೂಲಕ ಈ ಪ್ರಬಂಧವನ್ನು ಮಂಡಿಸುತ್ತಿದ್ದೇನೆ.

**ಅಕ್ಕಮಹಾದೇವಿ:** ಕನ್ನಡದ ಪ್ರಥಮ ಮಹಿಳಾ ಕವಿಯತ್ರಿ ಶರಣ ಚಳುವಳಿಯ ಸ್ವಾಭಿಮಾನದ ಪ್ರತೀಕವಾಗಿ, ಸ್ತ್ರೀವಾದಿ ಚಳುವಳಿಯ ನಿಜವಾದ ಪ್ರತಿಪಾದಕಿಯಾಗಿ, ಅಕ್ಕರೆಯ ಅಕ್ಕನಾಗಿ ಹಲವು ರೀತಿಗಳಲ್ಲಿ ಗುರುತಿಸಬಹುದಾಗಿದೆ. ನಿರ್ಮಲಶೆಟ್ಟಿ ಮತ್ತು ಸುಮತಿ ದಂಪತಿಗಳ ಮಗಳಾಗಿ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕಿನ ಉಡುತಡಿ ಗ್ರಾಮದಲ್ಲಿ ಜನಿಸಿದಳು. ಚಿಕ್ಕ ವಯಸ್ಸಿನಲ್ಲೆ ಸಕಲ ಸುಖವನ್ನು ತ್ಯಜಿಸಿ ಸಾಕ್ಷಾತ್ ಶಿವ (ಮಲ್ಲಿಕಾರ್ಜುನ)ನನ್ನು ಪತಿಯಾಗಿ ಸ್ವೀಕರಿಸಿ, ಲೌಕಿಕ ಜಗತ್ತನ್ನು ಧಿಕ್ಕರಿಸಿ ಕೇಶಾಂಬರಿಯಾಗಿ ನಡೆದವಳು. ಶರಣ ಚಳುವಳಿಯಲ್ಲಿ ಎತ್ತರದ ಚೇತನವಾಗಿ ಮೂಡಿ ಬಂದ ವ್ಯಕ್ತಿತ್ವ ಅಕ್ಕನದು. ಇವರ ವಚನಗಳು ಕನ್ನಡ ಸಾಹಿತ್ಯದ ಮೌಲಿಕ ಬರವಣಿಗೆಗಳಾಗಿವೆ. 'ಯೋಗಾಂಗ ತ್ರಿವಿಧಿ' ಎಂಬ ತ್ರಿಪದಿಗಳ ಚಿಕ್ಕ ಕೃತಿಯನ್ನು ರಚಿಸಿದ್ದಾಳೆ.
ವಚನಾಂಕಿತ– ಚನ್ನಮಲ್ಲಿಕಾರ್ಜುನ

> "ಹೆದರದಿರು ಮನವೇ ಬೆದರದಿರು ಮನವೆ
> ನಿಜವನರಿತು ನಿಶ್ಚಿಂತವಾಗಿರು
> ಫಲವಾದ ಮರನ ಇಡುವುದೊಂದು ಕೋಟಿ
> ಎಲರದ ಮರನ ಇಡುವರೊಬ್ಬರ ಕಾಣೆ
> ಭಕ್ತಿಯುಳ್ಳವರ ಬೈವರೊಂದು ಕೋಟಿ
> ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ
> ನಿಮ್ಮ ಶರಣರ ನುಡಿಯೆ ಎನಗೆ ಗತಿಸೋಪಾನ, ಚೆನ್ನಮಲ್ಲಿಕಾರ್ಜುನಾ"

ಜೀವನದ ಹೋರಾಟದಲ್ಲಿ ಸಕ್ರಿಯವಾಗಿ ಸ್ಪಂದಿಸಬಲ್ಲ ಮಹತ್ವಾಕಾಂಕ್ಷಿಗೆ ಪ್ರತಿಕ್ರಿಯೆಗಳು ಸಾವಿರಾರು. ವಿಚಾರ–ವಿಮರ್ಶೆ–ವಿಡಂಬನೆ, ನಿರ್ಧಾರ–ತೀರ್ಮಾನಗಳೆಲ್ಲವೂ ಪುರುಷನ ಸೊತ್ತಾಗಿದ್ದ ಸಮಾಜದಲ್ಲಿ ಅಕ್ಕನು ಪ್ರವಾಹದ ವಿರುದ್ಧ ಏಕಾಂಗಿಯಾಗಿ ಈಸಿ ಜಯಿಸಿದವಳು. ಲೋಕ ಕಲ್ಯಾಣಕ್ಕಾಗಿ ಶ್ರಮಿಸುವವರಿಗೆ ಸವಾಲುಗಳು ಹೆಚ್ಚಾಗಿರುತ್ತವೆ. ಧೃಡವಾದ ಆತ್ಮವಿಶ್ವಾಸ, ಸ್ವ–ಸಾಮರ್ಥ್ಯಗಳಿಂಥ ಅವರಿಗೆ ಜಯವಾಗುವುದು. ಆದರೆ ಅಲ್ಪ ತೃಪ್ತಿ–ಸಂಕುಚಿತ ದೃಷ್ಠಿಯುಳ್ಳ ಕೂಪಮಂಡೂಕ ಪ್ರವೃತ್ತಿಯವರಿಗೆ ಜೀವನದಲ್ಲಿ ಹೋರಾಟವೂ ಇಲ್ಲ, ಸಮಸ್ಯೆ–ಸವಾಲುಗಳೂ ಇಲ್ಲ. ಇದು ಸರ್ವಕಾಲಿಕ ಸತ್ಯ. ಅಕ್ಕಮಹಾದೇವಿ ಧೈರ್ಯದಿಂದಲೇ ತನ್ನ ಗುರಿಸಾಧನೆಯಲ್ಲಿ ಬರುವ ಎಡರು–ತೊಡರುಗಳನ್ನು ವಿವೇಕ, ಸಮಾಧಾನ, ಸಂಯಮಗಳಿಂದ ಎದುರಿಸಿ ಶ್ರೇಷ್ಠ ವ್ಯಕ್ತಿ ಎನಿಸಿಕೊಂಡಿದ್ದಾಳೆ.

**ಮುಕ್ತಾಯಕ್ಕ:** ವಚನ ಸಾಹಿತ್ಯದ ಧ್ರುವತಾರೆಯಾಗಿ, ೧೨ನೆಯ ಶತಮಾನದ ಶಿವಶರಣೆಯರ ಸಮೂಹದಲ್ಲಿ ಅಕ್ಕಮಹಾದೇವಿಯ ನಂತರ ಎದ್ದು ಕಾಣುವ ಹೆಸರು ಮುಕ್ತಾಯಕ್ಕನದು. ಗದಗ ಜಿಲ್ಲೆಯ ಲಕ್ಕುಂಡಿ ಗ್ರಾಮದವಳಾಗಿದ್ದು, ಅಜಗಣ್ಣನ ಸೋದರಿ. ಇವರಿಬ್ಬರದು ಅನನ್ಯ ಭ್ರಾತೃಪ್ರೇಮ. ಈಕೆಯ ಆಧ್ಯಾತ್ಮದ ಗುರು, ತಂದೆ ಎಲ್ಲವೂ ಅಣ್ಣನೇ ಆಗಿದ್ದನು. ಮುಕ್ತಾಯಕ್ಕನಿಗೆ ೧೦ ವರ್ಷವಿರುವಾಗಲೇ 'ಮಸಳಿಕಲ್ಲು' ಎಂಬ ಗ್ರಾಮಕ್ಕೆ ಮದುವೆ ಮಾಡಿ ಕೊಡುವರು. ಆಧ್ಯಾತ್ಮಿಕ ಸಿದ್ಧಾಂತದಲ್ಲಿ ವಿಶಾಲ ಮನೋಭಾವ ವೈಚಾರಿಕತೆಯ ದಿಟ್ಟವ್ಯಕ್ತಿತ್ವವನ್ನು ಹೊಂದಿದ್ದವರು. ವಚನಾಂಕಿತ– ಅಜಗಣ್ಣ ತಂದೆ.

"ಗುರುವಚನದಿಂದಲ್ಲದೆ ಲಿಂಗವನರಿಯಬಾರದು
ಗುರುವಚನದಿಂದಲ್ಲದೆ ಜಂಗಮವರಿಯಬಾರದು
ಗುರುವಚನದಿಂದಲ್ಲದೆ ಪ್ರಸಾದನರಿಯಬಾರದು
ಗುರುವಚನದಿಂದಲ್ಲದೆ ತನ್ನ ತಾನರಿಯಬಾರದು

ಹಿಂದಣ ಜನ್ಮದಲ್ಲಿ ಲಿಂಗವ ಪೂಜಿಸಿ ಇಂದು ಜ್ಞಾನೋದಯವಾದಡೆ
ಗುರುವಿಲ್ಲದ ಮುನ್ನ ಆಯಿತ್ತೆನ್ನಬಹುದೆ?
ತನ್ನಲ್ಲಿ ತಾನು ಸನ್ನಿಹಿತನಾಗಿಹೆನೆಂದಡೆ ಗುರುವಿಲ್ಲದೆ ಆಗದು ಕೇಳಾ,
ಆ ರೂಢಿಯ ಕೂಬ ಸಮನಿಸದು ಕೇಳಾ"

ಈ ವಚನದಲ್ಲಿ ಮುಕ್ತಾಯಕ್ಕ ತನ್ನ ಭಾವಕ್ಕೆ ಗುರುವಾದ ಬಸವಣ್ಣ, ನೋಟಕ್ಕೆ ಲಿಂಗವಾದ ಚೆನ್ನಬಸವಣ್ಣ, ಜ್ಞಾನಕ್ಕೆ ಜಂಗಮವಾದ ಪ್ರಭುದೇವ, ಪರಿಣಾಮಕ್ಕೆ ಪ್ರಸಾದವಾದ ಮರುಳಶಂಕರದೇವ, ಹೃದಯಕ್ಕೆ ಮಂತ್ರವಾದ ಮಡಿವಾಳಯ್ಯರನ್ನು ಸ್ಮರಿಸುತ್ತಾಳೆ. ಲಿಂಗ, ಜಂಗಮ, ಪ್ರಸಾದ ತತ್ವಗಳನ್ನರಿತು, ಅರಿವು ಸಾದಿಸಿಕೊಂಡು ನಿಜಪದವನ್ನು ಅರಿಯುವವರೆಗೂ ಸಾಧಕನಿಗೆ ಗುರುವಿನ ಅವಶ್ಯಕತೆಯಿದೆಯೆಂದು ನಂಬುವುದರ ಜೊತೆಗೆ ಗುರುವಿನ ದೀಕ್ಷೆ ಪಡೆದು ಸಾಧನೆಯ ಮಾರ್ಗದಲ್ಲಿ ಹೊರಟ ಭಕ್ತನಿಗೆ ಗುರುವು ಕೊನೆಯವರೆಗೂ ಮಾರ್ಗದರ್ಶಕನಾಗಿರುತ್ತಾನೆ. ಸಾಧಕ ತನ್ನ ತಾನರಿತರೂ ಕೂಡ ಅಲ್ಲಿ ಅರಿವೇ ಗುರುಸ್ಥಾನದಲ್ಲಿರುತ್ತದೆ. ಶಿಷ್ಯನಾದವನು ಗುರುವಿಲ್ಲದೇ ಏನನ್ನು ಸಾಧಿಸಲಾರ ಎಂದು ಪ್ರತಿಪಾದಿಸಿದ್ದಾಳೆ.

**ಅಕ್ಕನಾಗಮ್ಮ:** ೧೨ನೆಯ ಶತಮಾನದ ಕನ್ನಡ ನಾಡಿನ ಶಿವಶರಣೆಯರಲ್ಲಿ ಅಗ್ರಗಣ್ಯಳು. ಬಾಗೇವಾಡಿ ತಾಲೂಕಿನ ಇಂಗಳೇಶ್ವರ ಈಕೆಯ ಜನ್ಮಸ್ಥಳ. ಇಲ್ಲಿಯ ಅಗ್ರಹಾರದ ಅಧಿಪತಿಗಳಾಗಿದ್ದ ಮಾದರಸ ಮತ್ತು ಮಾದಲಾಂಬಿಕೆ ದಂಪತಿಗಳಿಗೆ ಅಕ್ಕನಾಗಮ್ಮ ಜ್ಯೇಷ್ಠ ಪುತ್ರಿಯಾಗಿ ಕ್ರಿ.ಶ. ೧೧೧೮ರಲ್ಲಿ ಜನಿಸಿದಳು. ಅಕ್ಕನಾಗಮ್ಮನ ಸಹೋದರ ಭಕ್ತಿ ಭಂಡಾರಿ ಬಸವಣ್ಣನವರು. ಪತಿ ಕೂಡಲಸಂಗಮದ ಶಿವಸ್ವಾಮಿ. ಮಗ ಚನ್ನಬಸವಣ್ಣ. ಮಹಾಮನೆಯ ಸೂತ್ರಧಾರಿಣಿಯಾಗಿ, ಮಹಾಶಕ್ತಿಯಾಗಿ, ಅನ್ನಪೂರ್ಣೆಯಾಗಿ, 'ಅನುಭವ ಮಂಟಪ'ದ ಜ್ಞಾನ ಹಾಗೂ ಅನುಭಾವ ದಾಸೋಹದಲ್ಲಿ ಭಾಗಿಯಾಗಿ ತಮ್ಮನ ಅಭ್ಯುದಯಕ್ಕೆ ನೆರವಾದವಳು. ಮಹಾಯೋಗಿನಿಯಾದ ಈಕೆಯ ಸ್ಮಾರಕಗಳು ಬಿಜಾಪುರ ಜಿಲ್ಲೆಯ ಇಂಗಳೇಶ್ವರ, ಬೀದರ ಜಿಲ್ಲೆಯ ಕಲ್ಯಾಣ, ಉತ್ತರ ಕನ್ನಡ ಜಿಲ್ಲೆಯ ಉಳವಿಯಲ್ಲಿವೆ. ನಾಗಮ್ಮನ ವಚನಗಳ ವಸ್ತು–ಬಸವಭಾವ, ವ್ರತಾಚಾರ, ಶರಣಸತಿ–ಲಿಂಗಪತಿ ಮನೋಧರ್ಮ ಇವುಗಳ ಜೊತೆಗೆ ಜೀವನದಲ್ಲಿ ಎದುರಿಸಿದ ಎಡರು–ತೊಡರುಗಳ ಕುರಿತು ತನ್ನ ವಚನಗಳಲ್ಲಿ ಪ್ರಸ್ತಾಪಿಸುತ್ತಾಳೆ.

ವಚನಾಂಕಿತ: 'ಬಸವಣ್ಣ ಪ್ರಿಯ ಚೆನ್ನಸಂಗಣ್ಣ'

"ಶ್ರೀ ಗುರುವೇ ತಾಯಿ ತಂದೆಯಾಗಿ
ಲಿಂಗವೇ ಪತಿಯಾಗಿ
ಜಂಗಮವೇ ಅತ್ತೆಮಾವಂದಿರಾಗಿ
ಶಿವಭಕ್ತರೆ ಬಾಂಧವರಾಗಿ
ಸತ್ಯ ಸದಾಚಾರವೆಂಬ ಮನೆಗೆ ಕಳುಹಿದರಾಗಿ
ಶರಣಸತಿ ಎಂಬ ನಾಮ ನಿಜವಾಯಿತ್ತು ।
ಅದಂತೆ ಇರುವೆ
ಹಿಂದು ಮುಂದರಿಯದೆ ನಡೆವೆ
ಮನಕ್ಕೆ ಮನಸಾಕ್ಷಿಯಾಗಿ ಮಾಡುವೆ
ಸುಖ–ದುಃಖ ಬಸವಣ್ಣ ಪ್ರಿಯ ಚೆನ್ನಸಂಗಯ್ಯ ನಿಮ್ಮಡಿಗಳಿಗೆ"

ಶರಣಸತಿ–ಲಿಂಗಪತಿ ತತ್ವವನ್ನು ನಾಗಮ್ಮ ಹೇಗೆ ಬದುಕಿನಲ್ಲಿ ಅಳವಡಿಸಿಕೊಂಡಿದ್ದರೆಂಬುದಕ್ಕೆ ಈ ವಚನವು ಸಾಕ್ಷಿಯಾಗಿದೆ. ಲೋಕ ಜೀವನದಲ್ಲಿ ಹೊಗಳಿಕೆ ಮತ್ತು ತೆಗಳಿಕೆಗಳೂ ಇದ್ದೇ ಇರುತ್ತವೆ. ಆದರೆ ಎರಡನ್ನು ಸರಿ ಸಮವಾಗಿ ಜೀವನದಲ್ಲಿ ಸ್ವೀಕರಿಸಬೇಕು. ಅಂದಾಗ ಮಾತ್ರ ಸಂತೋಷದ ಬದುಕು ನಮ್ಮದಾಗುತ್ತದೆ ಎಂದು ಮನದಟ್ಟು ಮಾಡಿದ್ದಾಳೆ.

**ಸತ್ಯಕ್ಕ:** ೧೨ನೆಯ ಶತಮಾನದಲ್ಲಿ ಹೆಸರಿಗೆ ತಕ್ಕಂತೆ ಒಬ್ಬ ಪ್ರಮಾಣಿಕ ಸತ್ಯ ಸಾಧಕಿ. ಇವರು ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪದ ಹಿರೇಬಂಬೂರನಲ್ಲಿ ಕ್ರಿ.ಶ. ೧೧೬೦ರಲ್ಲಿ ಜನಿಸಿದರು. ಸಂಸಾರದಿಂದ ದೂರವೇ ಉಳಿಯಲು ನಿರ್ಧರಿಸಿ ಅವಿವಾಹಿತಯಾಗಿಯೇ ಉಳಿದು ಆಧ್ಯಾತ್ಮ ಸಾಧನೆಗೈದ ಶಿವಶರಣೆ. ತಾನು ಲಂಚ–ವಂಚನೆಗಳಿಗೆ ಕೈಯೊಡ್ಡದವಳೆಂದೂ, ದಾರಿಯಲ್ಲಿ ಬಿದ್ದ ಅನ್ಯರ ಒಡವೆ, ವಸ್ತುಗಳನ್ನು ಮುಟ್ಟುವುದಿಲ್ಲವೆಂದು ತನಗೆ ತಾನೇ ನಿರ್ಭಂದ ವಿಧಿಸಿ ಕೊಂಡವಳು. ಶಿವನನ್ನು ಅಂತರಂಗದ ದೈವವೆಂದು ಪರಿಗಣಿಸಿ ಅವನೊಡನೆ ಸಂಭಾಷಣೆ ನಡೆಸುತ್ತಿದ್ದಳು. ಶಿವಭಕ್ತರ ಮನೆಯ ಕಸವನ್ನು ಗುಡಿಸುವುದು ಇವಳ ಕಾಯಕವಾಗಿತ್ತು. ಸಾಮಾನ್ಯವಾಗಿ ಶಿವಶರಣ–ಶರಣೆಯರ ಅನುಭಾವ ಗೋಷ್ಠಿಗಳಲ್ಲಿ ಸದಾ ಚರ್ಚೆಗೆ ಬರುತ್ತಿದ್ದ ಶಿವ ಪಾರಮ್ಯ, ಸದ್ಭಕ್ತರ ಹಿರಿಮೆ, ಮಹಿಮೆ, ಸತಿಪತಿಭಾವ, ಸದಾಚಾರದಲ್ಲಿ ನಡೆಯುವ ಗುರು–ಶಿಷ್ಯ–ಜಂಗಮರ ವಿವರಣೆ ಸತ್ಯಕ್ಕನ ವಚನಗಳಲ್ಲಿ ಕಂಡುಬರುವುದು.

ಸತ್ಯಕ್ಕನ ವಚನಾಂಕಿತ–'ಜಂಬುಕೇಶ್ವರ'

"ಅರ್ಚನೆ ಪೂಜನೆ ನೇಮವಲ್ಲ
ಮಂತ್ರ ತಂತ್ರ ನೇಮವಲ್ಲ
ಧೂಪ ದೀಪಾರತಿ ನೇಮವಲ್ಲ !
ಪರಧನ ಪರಸ್ತ್ರೀ ಪರದೈವಂಗಳಿಗೆರದಿಪ್ಪದೆ ನೇಮ
ಶಂಭು ಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯನೇಮ"

ಪ್ರಸ್ತುತ ವಚನ ಸರಳವಾಗಿದ್ದರೂ ನೇರ ನುಡಿಗಳಲ್ಲಿ ಮೂಡಿ ಬಂದಿದ್ದು ಲೋಕದಲ್ಲಿ ಬಾಹ್ಯಾಡಂಬರಗಳಿಂದ ಪೂಜೆ ಮಾಡುವುದನ್ನು ಕಟುವಾಗಿ ಟೀಕಿಸುತ್ತಾಳೆ. ಅಂತರಂಗದಲ್ಲೊಂದು–ಬಹಿರಂಗದಲ್ಲೊಂದು ರೀತಿಯಲ್ಲಿ ನಡೆಯುವವರಿಗೆ ಎಚ್ಚರಿಸುತ್ತಾಳೆ. ಈ ವರ್ತನೆಯು ಸರಿಯಲ್ಲ, ಭಕ್ತನಾದವನಿಗೆ ಅಂತರಂಗ ಶುದ್ಧಿ ಮುಖ್ಯ. ಅದು ಮನಸ್ಸಿನಲ್ಲಿರುವ ಕಲ್ಮಷವನ್ನು

ಹೊಡೆದೊಡಿಸಿ ನಿಷ್ಕಲ್ಮಷ ಭಕ್ತಿಯಿಂದ ಪೂಜೆ ಮಾಡಬೇಕು ಅಂದಾಗ ಮಾತ್ರ ಶಿವನ ಸಾನಿಧ್ಯ ದೊರೆಯುವುದು ಎಂದಿದ್ದಾಳೆ.

**ದುಗ್ಗಳೆ:** ೧೨ನೆಯ ಶತಮಾನದ ಶ್ರೇಷ್ಠ ಶಿವಶರಣೆ. ಕ್ರಿ.ಶ.ಸು. ೧೧೬೦ ರಲ್ಲಿ ಕಲಬುರ್ಗಿಯ ಗೊಬ್ಬೂರದಲ್ಲಿ ಜನಿಸಿದಳು. ತಂದೆ ಮಲ್ಲಿನಾಥ, ತಾಯಿ ಮಹಾದೇವಿ. ದುಗ್ಗಳೆ ಚಿಕ್ಕ ವಯಸ್ಸಿನಲ್ಲಿಯೇ ಅಂದಿನ ಸಮಾಜ ವ್ಯವಸ್ಥೆಯನ್ನು ಅರಿತವಳಾಗಿದ್ದಳು. 'ಮಾತು ಬೆಳ್ಳಿ–ಮೌನ ಬಂಗಾರ'– ಈ ಉಕ್ತಿಯು ದುಗ್ಗಳೆಗೆ ಹೇಳಿ ಮಾಡಿಸಿದ ನುಡಿಮುತ್ತು. ತನ್ನ ಕಾಯಕನಿಷ್ಠೆ, ದಾಸೋಹವನ್ನು ಜೀವನವನ್ನಾಗಿ ಮಾಡಿಕೊಂಡು ಬದುಕಿದವಳು ದುಗ್ಗಳೆ. ಈಕೆಯ ಪತಿ–ಜೇಡರ ದಾಸಿಮಯ್ಯ. ಇವರಿಬ್ಬರ ಬದುಕನ್ನು ಕುರಿತು ನೋಡುವುದಾದರೆ ಒಂದು ಕಡೆ ದಾಸಿಮಯ್ಯನೇ 'ಇಚ್ಛೆಯರಿತು ನಡೆವ ಸತಿ, ದಾಸೋಹಕ್ಕೆ ತವನಿಧಿ, ಕೈಲಾಸ ಕಾಣಲು ನೇಯ್ಗೆಯ ಕಾಯಕ ದೊರೆತು ತನ್ನ ಬದುಕು ಶಿವಸನ್ನಿಧಿಯ ಕೈಲಾಸ' ವೇ ಆಯಿತೆಂದು ಸಂತೋಷ ಪಡುತ್ತಾನೆ.
ವಚನಾಂಕಿತ–ದಾಸಯ್ಯ ಪ್ರಿಯ ರಾಮನಾಥ.

"ಭಕ್ತನಾದೊಡೆ ಬಸವಣ್ಣನಂತಾಗಬೇಕು
ಜಂಗಮನಾದೊಡೆ ಪ್ರಭುದೇವರಂತಾಗಬೇಕು
ಯೋಗಿಯಾದೊಡೆ ಅಜಗಣ್ಣನಂತಾಗಬೇಕು
ಇಂತಿವರ ಕಾರುಣ್ಯ ಪ್ರಸಾದವ ಕೊಂಡು
ಸತ್ತಹಾಗಿರಬೇಕಲ್ಲದೆ ತತ್ವದ ಮಾತು ಎನಗೇಕಯ್ಯ
ದಾಸಯ್ಯ ಪ್ರಿಯ ರಾಮನಾಥ"

ಭಕ್ತಿ ಎಂದರೆ ಬಸವಣ್ಣ. ಗುರು–ಲಿಂಗ–ಜಂಗಮಕ್ಕೆ ಬಸವಣ್ಣನವರು ತೋರಿಸಿದ ಭಕ್ತಿ ಶಿವಶರಣರಿಗೆಲ್ಲಾ ಭಕ್ತಿಮಾರ್ಗದ ಹೆದ್ದಾರಿಯಾಯಿತು. ಸದಾ ಕಾಯಕದಲ್ಲಿ ನಿರತರಾಗಿ ಮನ ಕೂಡಲಸಂಗನ ಭಕ್ತಿಯಲ್ಲಿ ನಿರತವಾಗಿರುವುದು. ತನ್ನ ಕಾಯ (ಶರೀರ)ವನ್ನು ಕಾಯಕದಲ್ಲಿ ತೊಡಗಿಸಿ ಶಿವಭಕ್ತಿಯಲ್ಲಿ ಕೈಲಾಸವನ್ನು ಕಾಣುತ್ತಾ ಸಕಲರಿಗೂ ಲೇಸನ್ನು ಬಯಸುತ್ತಾ ದಾಸೋಹದ ಕೈಂಕರ್ಯದಲ್ಲಿ ಭಕ್ತಿಯನ್ನು ಕಾಣುತ್ತಾ ನಿರತನಾದ ಬಸವಣ್ಣನ ಭಕ್ತಿಯನ್ನು ಮನಸಾರೆ ತುಂಬು ಹೃದಯದಿಂದ ಹೊಗಳುತ್ತಾಳೆ. ಅಂತಹ ಭಕ್ತಿ ಭಂಡಾರಿ ಬಸವಣ್ಣನಂತಹ ಭಕ್ತನಾಗಬೇಕು ಎಂದು ಹೇಳುತ್ತಾಳೆ.
೧೨ನೆಯ ಶತಮಾನದ ಜ್ಞಾನದ ಮೂಲಕ ಶಿವಪಥವನ್ನು ಬಿಟ್ಟವರಿಗೆ ಹಿತವಚನಗಳನ್ನು ಹೇಳುತ್ತಾ ಜನರ ಮನಸ್ಸನ್ನು ಶಿವಪಥದತ್ತ ತಿರುಗಲು ಮಾರ್ಗದರ್ಶನ ಮಾಡುತ್ತಾ ಊರಿಂದೂರಿಗೆ ಸಂಚರಿಸುತ್ತಾ ಶೂನ್ಯ ಸಿಂಹಾಸನದ ಮಹಾಗುರುವಾಗಿ ತಪ್ಪು ದಾರಿಯಲ್ಲಿ ನಡೆಯುವವರಿಗೆ ಎಚ್ಚರಿಸುತ್ತಾ ಬೋಧನೆ ಮಾಡುವ ಮಹಾ ಜಂಗಮ ಪ್ರಭುದೇವರನ್ನು ಸ್ಮರಿಸುವಳು.
ಸಾಮಾಜಿಕ ಅಭಿವೃದ್ಧಿ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡು, ಶಿವಾನುಭವಿಯಾಗಿ ಶಿವಯೋಗವನ್ನು ಸಿದ್ಧಿಸಿ ಕೊಂಡು ಸಿದ್ಧರಾಮನ ಬಗ್ಗೆ ಅಪಾರ ಅಭಿಮಾನದಿಂದ 'ಯೋಗಿಯಾದಡೆ ಸಿದ್ಧರಾಮನಂತಾಗಬೇಕು' ಎಂದಿದ್ದಾಳೆ.
ಅಜಗಣ್ಣ ಮಹಾನ್ ಶರಣ, ಗುಪ್ತಭಕ್ತ, ಬಾಹ್ಯ ಪ್ರಪಂಚದಲ್ಲಿ ಎಂದೂ ತಾನು ಶಿವಭಕ್ತನೆಂದು ತೋರಗೊಡದೆ, ಮಾನಸಿಕವಾಗಿ ಅಂತರ್ಯದಲ್ಲಿ ಶಿವನನ್ನು ಕಂಡಂತಹ ಶಿವಶರಣ. ಇವರನ್ನು ಕೂಡಾ ಸ್ಮರಿಸುವಳು. ಹೀಗೆ ಶಿವ–ಶರಣರೆಲ್ಲರ ನಡೆ–ನುಡಿ ಒಪ್ಪುವಂತಿರಬೇಕಾದರೆ ಅದನ್ನು ಪ್ರಸಾದವಾಗಿ ಸ್ವೀಕರಿಸಿದ ಮೇಲೆ ಅದರಂತೆ ನಡೆಯಬೇಕು. ಅಲ್ಲಿ ಚರ್ಚೆ ತತ್ವಗಳನ್ನು ಆಡುವುದು ಸಮಂಜಸವಲ್ಲ. ಇವು ಭಕ್ತಿಯ ಸೋಪಾನಗಳೆಂಬ ಭಾವ ದುಗ್ಗಳೆಯದಾಗಿದೆ.

**ಸುಗ್ಗಲೆ:** (ಕ್ರಿ.ಶ.ಸು. ೧೦೧೫–೪೪) ಚಾಳುಕ್ಯ ಜಗದೇಕಮಲ್ಲ ಎರಡನೆಯ ಜಯಸಿಂಹನ ಪಟ್ಟದರಸಿ. ಈಕೆ ಮೊದಲು ಶೈವಳಾಗಿದ್ದು ಅನಂತರ ದೇವರ ದಾಸಿಮಯ್ಯನಿಂದ ವೀರಶೈವ ದೀಕ್ಷೆಯನ್ನು ಸ್ವೀಕರಿಸಿದಳೆಂಬುದು ಸಾಹಿತ್ಯ ಕೃತಿಗಳಲ್ಲಿನ ಹೇಳಿಕೆ. ವೀರಶೈವ ಕವಿಗಳು ಮತ್ತು ಪುರಾಣ ಕರ್ತೃಗಳು ಈಕೆಯನ್ನು ಭಕ್ತಿಯಿಂದ ಸ್ಮರಿಸಿದ್ದಾರೆ. ತೆಲುಗು ಹಾಗೂ ಕನ್ನಡ ಕಾವ್ಯಗಳಲ್ಲಿ ಹೆಚ್ಚಾಗಿ ಪ್ರಸ್ತಾಪಿತಳಾಗಿ 'ಶರಣೆ' ಪದಕ್ಕೆ ಅರ್ಹಳಾಗಿರುವವಳು ಸುಗ್ಗಲೆ. ವಚನ ಚಳುವಳಿ ಆರಂಭವಾಗಿ ಇಡೀ ಸಮಾಜವನ್ನು ವ್ಯಾಪಿಸುವ ಮೂಲಕ ೧೨ನೇ ಶತಮಾನದ ಮನೆ ಮನವನ್ನು ತಲುಪುವಲ್ಲಿ ಯಶಸ್ವಿಯಾಯಿತು. ಅಂದಿನ ಸಂದರ್ಭದಲ್ಲಿ ದಾಸಿಮಯ್ಯನ ತತ್ವ ಸಿದ್ಧಾಂತಗಳಿಂದ ಪ್ರಭಾವಿತಳಾಗಿ ಶರಣ ಧರ್ಮದ ವಿಚಾರಗಳ ಪ್ರಚಾರಕ್ಕೆ ಬೆನ್ನೆಲುಬಾಗಿ ನಿಂತು ರಾಜಾಶ್ರಯ ದೊರೆಯುವಂತೆ ಮಾಡಿದ ಪ್ರಥಮ ಮಹಿಳೆ ಸುಗ್ಗಲೆಯಾಗಿದ್ದಾಳೆ. ದೇವೂರು(೧೦೨೯), ಕೆರೆಸಂತೆ (೧೧೮೨), ಬೇಲೂರಿನ (೧೨೨೦) ಶಾಸನಗಳು ಸುಗ್ಗಲೆಯನ್ನು ಮುಕ್ತ ಕಂಠದಿಂದ ಹೊಗಳಿವೆ. ಅತ್ತಿಮಬ್ಬೆಯ ತರುವಾಯ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಸುಗ್ಗಲೆಯ ಹೆಸರು ಪ್ರಖ್ಯಾತವಾದುದು.

"ಜಿನಭಕ್ತನೆಸೆವ ದೇಸಿಂಗ ಬಲ್ಲಾಳನಾ
ತನ ಮಡದಿ ಸುಗ್ಗಲೆಯು
ಜನಪತಿಯನಂದು ಶಿವಭಕ್ತನಂ ಮಾಡಿದಳದೇನೆಂಬೆನಚ್ಚರಿಯನು"

ಎಂಬಲ್ಲಿ ಸುಗ್ಗಲೆಯ ಶಿವಭಕ್ತಿ ಹಾಗೂ ದೇವರ ದಾಸಿಮಯ್ಯನು ಜೈನರ ಕೂಡ ವಾದಮಾಡಿ ಗೆದ್ದುದನ್ನು ಘಟಸರ್ಪವನ್ನು ಲಿಂಗವನ್ನಾಗಿ ಪರಿವರ್ತಿಸಿದ ಪವಾಡದಿಂದ ಜನಪತಿಯಾದ ದೇಸಿಂಗ ಬಲ್ಲಾಳನು ಜಿನಭಕ್ತನಾಗಿದ್ದವನು ಶಿವಭಕ್ತನಾಗಿ ಪರಿವರ್ತಿತನಾದ ಪ್ರಸಂಗವನ್ನು ಪರಿಣಾಮಕಾರಿಯಾಗಿ ವಿವರಿಸುತ್ತದೆ.

**ಆಯ್ದಕ್ಕಿ ಲಕ್ಕಮ್ಮ:** ೧೨ನೇ ಶತಮಾನದ ಶ್ರೇಷ್ಠ ಮತ್ತು ವಿಶಿಷ್ಟ ಮನೋಧರ್ಮದವಳು ಆಯ್ದಕ್ಕಿ ಲಕ್ಕಮ್ಮ. ಈಕೆ ಮಾರಯ್ಯನ ಪತ್ನಿಯಾಗಿದ್ದು ಮೂಲತಃ ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಅಮರೇಶ್ವರದವರು. ಬಸವಣ್ಣನವರ ತತ್ವಗಳಿಗೆ ಮಾರು ಹೋಗಿ ಕಲ್ಯಾಣಕ್ಕೆ ಬಂದು 'ಕಾಯಕವೇ ಕೈಲಾಸ' ಎಂದು ಭಾವಿಸಿ ಮಾತಿಗಿಂತ ಕೃತಿಯಲ್ಲಿ ನಂಬಿಕೆ ಇಟ್ಟು ಅದರಂತೆ ಬಾಳಿ ಬದುಕಿದವರು. ಅಕ್ಕಿಯನ್ನು ಆಯುವ ಕಾಯಕ ಕೈಗೊಳ್ಳುತ್ತಾರೆ.
ವಚನಾಂಕಿತ–ಮಾರಯ್ಯಪ್ರಿಯ ಅಮರೇಶ್ವರಲಿಂಗ

"ಆಸೆಯೆಂಬುದು ಅರಸಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯ
ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗುಂಟೆ ಅಯ್ಯ
ಈಸಕ್ಕಿಯಾಸೆ ನಿಮಗೇಕೆ ಈಶ್ವರನೊಪ್ಪ
ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ
ದೂರ ಮಾರಯ್ಯ_"

ದಾಸೋಹಕ್ಕೆ ಬೇಕಾಗಿರುವುದಕ್ಕಿಂತಲೂ ಹೆಚ್ಚಾಗಿ ಅಕ್ಕಿಯನ್ನು ಆಯ್ದುಕೊಂಡು, ಅಕ್ಕಿಯ ಗಂಟನ್ನು ಮನೆಗೆ ತಂದಾಗ ಲಕ್ಕಮ್ಮ ಅಚ್ಚರಿ ಹಾಗೂ ಆತಂಕದಿಂದ ಶಿವಶರಣರಾದವರು ಈ ಬಗೆಯಲ್ಲಿ ಆಸೆಯ ಸೆಳೆತಕ್ಕೆ ಒಳಗಾಗಬಾರದೆಂದು ಎಚ್ಚರಿಕೆಯನ್ನು ನೀಡುತ್ತಾಳೆ. ಒಳ್ಳೆಯ ನಡೆನುಡಿಗಳಿಂದ ಬದುಕನ್ನು ರೂಪಿಸಿಕೊಂಡು ಆ ನಡೆನುಡಿಗಳಲ್ಲಿ ಶಿವನನ್ನು ಕಾಣಬೇಕು ಅತಿಯಾಸೆಯಿಂದ ಮಾಡುವ ಯಾವುದೇ ಬಗೆಯ ಕೆಲಸವನ್ನು ದೇವರು ಒಪ್ಪುವುದಿಲ್ಲ ಎಂದು ತಿಳಿಸುತ್ತಾರೆ.

**ಲಿಂಗಮ್ಮ:** ೧೨ನೇ ಶತಮಾನದ ಹಡಪದ ಅಪ್ಪಣ್ಣನ ಹೆಂಡತಿ ಲಿಂಗಮ್ಮ.

ವ್ಯಕ್ತಿಯ ಹುಟ್ಟಿಗೂ ಅವನು ಸಾಧಿಸುವ ಸಿದ್ಧಿಗೂ ಏನೇನು ಸಂಬಂಧವಿಲ್ಲ ಎಂಬುದನ್ನು ನಿರೂಪಿಸಿದವಳು. ಭಕ್ತರಿಗೆ ತಾಂಬೂಲ ನೀಡುವ ಕಾಯಕದವಳು. ಸಾಧನೆಗೆ ಮೂಲ ಮನಸ್ಸನ್ನು ಸ್ವೇಚ್ಛೆಯಾಗಿ ಹರಿದಾಡಲು ಬಿಡದೆ ಬಯಲಿನೊಳಗೆ ಓಲಾಡುವ ಶರಣರ ಪಾದದಲ್ಲಿ ಬೆರೆಯ ಬೇಕೆನ್ನುವವಳು.

ವಚನಾಂಕಿತ– ಅಪ್ಪಣ್ಣಪ್ರಿಯ ಚನ್ನಬಸವಣ್ಣ

"ಕನಿಷ್ಠದಲ್ಲಿ ಹುಟ್ಟಿದೆ, ಉತ್ತಮರಲ್ಲಿ ಬೆಳೆದೆ
ಸತ್ಯ ಶರಣರ ಪಾದವಿಡಿದೆ, ಆ ಶರಣರ
ಪಾದವಿಡಿದು ಗುರುವ ಕಂಡೆ, ಲಿಂಗವ ಕಂಡೆ
ಜಂಗಮವ ಕಂಡೆ, ಪಾದೋದಕವ ಕಂಡೆ
ಪ್ರಸಾದವ ಕಂಡೆ, ಇಂತಿವರ ಕಂಡೆನ್ನ ಕಂಗಳ
ಮುಂದಣ ಕತ್ತಲೆ ಹರಿಯಲೊಡನೆ ಮಂಗಳದ
ಮಹಾಬೆಳಗಿನೊಳೊಗೋಲಾಡಿ ಸುಖಿಯಾದೆನಯ್ಯ
ಅಪ್ಪಣ್ಣಪ್ರಿಯ ಚನ್ನಬಸವಣ್ಣ"

ತಾನು ತೀರ ಸಾಮಾನ್ಯ ಜಾತಿಯವಳೆಂದೂ, ಬಸವಣ್ಣ ಮುಂತಾದ ಪ್ರಮಥರಿಂದ ತಾನೊಬ್ಬಳು ಮನುಷ್ಯಳಾದೆ ಎಂದು ಅನೇಕ ಕಡೆ ಹೇಳಿಕೊಂಡಿದ್ದಾಳೆ. "ಕನಿಷ್ಠದಲ್ಲಿ ಹುಟ್ಟಿದೆ, ಉತ್ತಮರಲ್ಲಿ ಬೆಳೆದು ನಿತ್ಯ ಶರಣರ ಪಾದವಿಡಿದೆ" ಇಂತವರ ಕಂಡು ನನ್ನ ಮುಂದಿನ ಕತ್ತಲೆ ಹರಿದು ಬೆಳಕು ಮೂಡಿತು, ಆ ಬೆಳಕಿನಲ್ಲಿ ಮಹಾ ಬೆಳಗನ್ನು ಕಂಡು ಸುಖಿಯಾದೆನೆಂದು ಲಿಂಗಮ್ಮ ಈ ವಚನದಲ್ಲಿ ಬಿಂಬಿಸಿದ್ದಾಳೆ.

**ಸಮಾರೋಪ:** ೧೨ನೆಯ ಶತಮಾನದ ಶರಣ–ಶರಣೆಯರು ಮೂಲತಃ ಸಾಹಿತಿಗಳಲ್ಲ. ದಾರ್ಶನಿಕರು, ರಾಜಾಶ್ರಯ, ಪಂಡಿತಮನ್ನಣೆ, ಬಿರುದಾವಳಿಗಳ ಪುರಸ್ಕಾರ, ಕೀರ್ತಿ– ಇವುಗಳ ಆಸೆಗಾಗಿ ಬರೆಯ ಹೊರಟವರಲ್ಲ. ಅವರ ಮೂಲ ಉದ್ದೇಶ ಧರ್ಮ ಪ್ರಸಾರ, ಸಾಮಾಜಿಕ ಪರಿವರ್ತನೆ. ತಮ್ಮ ಅನುಭವ, ಅನಿಸಿಕೆಗಳನ್ನು ಧರ್ಮತತ್ತ್ವಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ಹೇಳಿ ಅವರನ್ನು ಎಚ್ಚರಿಸಿದರು. ಆಧ್ಯಾತ್ಮಿಕ ದೃಷ್ಠಿಯಿಂದ ಈ ಶಿವಶರಣೆಯರ ಸಾಧನೆ ಸಿದ್ಧಿ ಅದ್ಭುತವಾದುದು.

ಅನುಭವ ಮಂಟಪದಲ್ಲಿ ಶರಣರು ಕಲ್ಪಿಸಿಕೊಟ್ಟ ಸಮಾನ ಅವಕಾಶಕ್ಕೆ ಪ್ರತಿಸ್ಪಂದಿಸಿದ ಶರಣೆಯರು ಏಕಕಾಲಕ್ಕೆ ಸಮಾನ ವೇದಿಕೆಯ ಮೇಲೆ ಸಮಾವೇಶಗೊಂಡು ತಮ್ಮ ಅನುಭವಗಳನ್ನು ಇತರರೊಡನೆ ಹಂಚಿಕೊಂಡ ಸನ್ನಿವೇಶ ಅಪೂರ್ವವಾದುದು. ಇದು ಪ್ರಪಂಚದ ಇತಿಹಾಸದಲ್ಲಿಯೇ ಪ್ರಪ್ರಥಮವಾದುದು. ಮಹಿಳೆಗೆ ಅವಕಾಶ ದೊರೆತರೆ ಏನನ್ನಾದರೂ ಸಾಧಿಸಬಲ್ಲಳು ಎಂಬುದನ್ನು ಪ್ರಚುರಪಡಿಸಿದವರು ೧೨ನೇ ಶತಮಾನದ ಶಿವಶರಣೆಯರು.

ಇಂತಹ ಶಿವಶರಣೆಯರ ವಚನಗಳು ಅವರವರ ಹೆಸರಿನಲ್ಲಿ ವಿಫುಲವಾಗಿ ದೊರೆಯದಿದ್ದರೂ, ದೊರೆತಷ್ಟು ವಚನಗಳು ಅವರ ದಿವ್ಯ ಜೀವನಕ್ಕೆ ಹಿಡಿದ ಕೈಗನ್ನಡಿಯಾಗಿವೆ. ಇವರೆಲ್ಲರ ವಚನಗಳಲ್ಲಿನ ಅಮೂಲ್ಯ ವಿಚಾರಗಳನ್ನು ಅರ್ಥೈಸಿಕೊಂಡು ಹೊಸದಿಕ್ಕನ್ನು ಕಂಡು ಕೊಳ್ಳಬೇಕಾಗಿರುವುದು ನಮ್ಮ ಮುಂದಿನ ದೃಷ್ಠಿಕೋನವಾಗಿದೆ.

**ಪರಾಮರ್ಶನ ಗ್ರಂಥಗಳು:**

೧. ವಚನ ಸಾಹಿತ್ಯ–ಎಂ. ಚಿದಾನಂದಮೂರ್ತಿ
೨. ಶರಣ ಕಥಾ ಮಾಲೆ–ಬಸವ ಸಮಿತಿ, ಬೆಂಗಳೂರು–೧
೩. ಶಿವಶರಣೆಯರ ವಚನಗಳು–ಆರ್.ಸಿ. ಹಿರೇಮಠ
೪. ಶಿವಶರಣೆಯರು ಜೀವನ ಮತ್ತು ಸಾಧನೆ–ಎಚ್.ಎಂ. ಬೀಳಗಿ
5. ಶಿವಶರಣೆಯರ ಚರಿತ್ರೆಗಳು–ಫ.ಗು. ಹಳಕಟ್ಟಿ